# ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ, 2002

## ಪ್ರಕರಣಗಳ ಪಟ್ಟಿ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ:


**ಪ್ರಕರಣಗಳು**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಪ್ರಾಧಿಕಾರವನ್ನು ರಚಿಸುವುದು ಮತ್ತು ನಿಗಮಿತಗೊಳಿಸುವುದು
4. ಪ್ರಾಧಿಕಾರದ ಸಭೆಗಳು
5. ಪ್ರಾಧಿಕಾರ ಭದ್ರತಾ ದಳ
6. ರಾಜ್ಯ ಮಟ್ಟದ ಸಲಹಾ ಸಮಿತಿ
7. ಆಯುಕ್ತನ ನೇಮಕ
8. ಆಯುಕ್ತನ ಕರ್ತವ್ಯಗಳು
9. ಯೋಜನಾಧಿಕಾರಿಯ ನೇಮಕ
10. ಲೆಕ್ಕಪತ್ರಾಧಿಕಾರಿ ಮುಂತಾದವರ ನೇಮಕ
11. ಪ್ರಾಧಿಕಾರದ ಪ್ರಕಾರ್ಯಗಳು
12. ಅಧ್ಯಕ್ಷರ ವಿಶೇಷ ಅಧಿಕಾರಗಳು
13. ಪ್ರತ್ಯಾಯೋಜನೆಗೆ ಅಧಿಕಾರ
14. ಪ್ರಾಧಿಕಾರದ ಅನುಮತಿ ಇಲ್ಲದೆ ಯಾವುದೇ ಇತರ ಪ್ರಾಧಿಕಾರ ಅಥವಾ ವ್ಯಕ್ತಿಯು ಅಭಿವೃದ್ಧಿಯನ್ನು ಕೈಗೊಳ್ಳಕೂಡದು
15. ಪ್ರವೇಶಕ್ಕೆ ಅಧಿಕಾರ
16. ಶುಲ್ಕ ವಿಧಿಸುವುದು
17. ಪ್ರಾಧಿಕಾರ ನಿಧಿ
18. ಬಜೆಟ್
19. ವಾರ್ಷಿಕ ವರದಿ
20. ಪ್ರಾಧಿಕಾರಕ್ಕೆ ಧನ ಸಹಾಯ ಮತ್ತು ಸಾಲಗಳು
21. ಸಾಲ ಪಡೆಯಲು ಪ್ರಾಧಿಕಾರಕ್ಕೆ ಅಧಿಕಾರ
22. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ
23. ಪ್ರಾಧಿಕಾರದ ನಿರ್ದೇಶನಗಳು
24. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡ
25. ಕಂಪೆನಿಗಳಿಂದ ಅಪರಾಧಗಳು
26. ಅಭಿಯೋಜನೆಗಾಗಿ ಅನುಮತಿ
27. ಪ್ರಾಧಿಕಾರವು ತನ್ನ ಅಥವಾ ಅದರ ವಿರುದ್ಧದ ಕ್ಲೇಮುಗಳನ್ನು ಸಂಧಾನ ಮಾಡಿಕೊಳ್ಳುವುದು
28. ವಸೂಲ್ಮಾಡಲಾದ ಜುಲ್ಮಾನೆಗಳನ್ನು ನಿಧಿಗೆ ಜಮೆ ಮಾಡುವುದು

29. ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರುವುದು

30. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ

31. ರಾಜ್ಯ ಸರ್ಕಾರದಿಂದ ನಿಯಂತ್ರಣ, ಇತ್ಯಾದಿ

32. ಅಧಿನಿಯಮವು ಇತರ ಕಾನೂನುಗಳ ಮೇಲೆ ಹೆಚ್ಚಿನ ಪ್ರಭಾವ ಹೊಂದಿರುವುದು

33. ನಿಯಮಗಳ ರಚನಾಧಿಕಾರ

34. ವಿನಿಯಮಗಳು

35. ತೊಂದರೆಗಳ ನಿವಾರಣೆ

36. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1861ರ ತಿದ್ದುಪಡಿ

37. 1974ರ ಕರ್ನಾಟಕ ಅಧಿನಿಯಮ 32ನ್ನು ಪ್ರಾಧಿಕಾರದ ಆವರಣಕ್ಕೆ ಅನ್ವಯಿಸುವುದು

ಅನುಸೂಚಿ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

ಹಂಪಿಯ ಎಲ್ಲಾ ಪುರಾತತ್ವ ಅವಶೇಷಗಳ ಮತ್ತು ನೈಸರ್ಗಿಕ ಪರಿಸರಗಳೊಂದಿಗೆ ಅದರ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವುದಕ್ಕಾಗಿ ಹಂಪಿ ವಿಶ್ವ ಪರಂಪರೆ ಪ್ರದೇಶದ ಸಮರ್ಥ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರವನ್ನು ರಚಿಸುವುದಕ್ಕಾಗಿ ಹಾಗೂ ಈ ಮುಂದಿನವುಗಳಿಗಾಗಿ ಉಪಬಂಧಗಳನ್ನು ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ಪರಂಪರೆ ಪ್ರದೇಶದ ಅನಿಯಂತ್ರಿತ ಅಭಿವೃದ್ಧಿಯನ್ನು ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಆ ಪ್ರದೇಶದ ಬಳಕೆಯನ್ನು ತಡೆಯುವುದಕ್ಕಾಗಿ;

(ii) ಅಭಿವೃದ್ಧಿ ಯೋಜನೆಯಲ್ಲಿ ಉದ್ದೇಶಿಸಲಾದ ಅಂಥ ಕಾಮಗಾರಿಗಳನ್ನು ಕೈಗೊಳ್ಳುವಂತೆ ಮಾಡುವುದು;

(iii) ಸ್ಥಳೀಯ ಪ್ರಾಧಿಕಾರಗಳ ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987ರ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರಗಳ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿ, ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಲಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಪರಂಪರೆ ಪ್ರದೇಶದ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಥ ಇತರ ನಿಕಾಯಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದು;

(iv) ಪರಂಪರೆ ಪ್ರದೇಶದೊಳಗಿನ ಸಾರ್ವಜನಿಕ ಸ್ವತ್ತನ್ನು ಸಂರಕ್ಷಿಸಲು ಸೂಕ್ತ ಕ್ರಮ ಕೈಗೊಳ್ಳುವುದು;

(v) ಹಂಪಿ ವಿಶ್ವ ಪರಂಪರೆ ನಿವೇಶನದ ಪುರಾತತ್ವ, ಐತಿಹಾಸಿಕ ಮತ್ತು ಪರಿಸರ ಮೌಲ್ಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಸೂಕ್ತ ಸಂಶೋಧನೆ ನಡೆಸಲು ಉತ್ತೇಜಿಸುವುದು ಮತ್ತು ಪ್ರೋತ್ಸಾಹಿಸುವುದು;

ಮತ್ತು ಪ್ರಾಧಿಕಾರ ನಿಧಿಯನ್ನು ರಚಿಸುವುದು ಹಾಗೂ ಅದಕ್ಕೆ ಪ್ರಾಸಂಗಿಕವಾದ ವಿಷಯಗಳು.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ಮತ್ತು ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವುದು) ಅಧಿನಿಯಮ, 1974 ಇವುಗಳನ್ನು ಪ್ರಾಸಂಗಿಕವಾಗಿ ಸೂಕ್ತ ತಿದ್ದುಪಡಿಗಳನ್ನು ಸಹ ಮಾಡಲು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2002ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 9]

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 5ನೇ ಮತ್ತು 32ನೇ ನಮೂದು ಹಾಗೂ ಮೂರನೇ ಪಟ್ಟಿಯ 20 ಮತ್ತು 40ನೇ ನಮೂದು)

## II

**2011ರ ಅಧಿನಿಯಮ ಸಂಖ್ಯೆ 10.**–ರಾಜ್ಯಮಟ್ಟದ ಸಲಹಾ ಸಮಿತಿಯನ್ನು "ರಾಜ್ಯ ಮಟ್ಟದ ಸಮಿತಿ" ಎಂದು ಪುನರ್‌ರಚಿಸಿ ಈಗಿರುವ ಬಳ್ಳಾರಿ ಉಸ್ತುವಾರಿ ಸಚಿವರ ಬದಲಾಗಿ ಮುಖ್ಯಮಂತ್ರಿಯವರನ್ನು ಅಧ್ಯಕ್ಷರನ್ನಾಗಿ, ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರುಗಳನ್ನು ಕ್ರಮವಾಗಿ ಉಪಾಧ್ಯಕ್ಷರು ಮತ್ತು ಸದಸ್ಯರುಗಳನ್ನಾಗಿ ಮರುನೇಮಿಸುವುದಕ್ಕಾಗಿ ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ ಸಂಖ್ಯೆ 18)ನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2011ರ ವಿಧಾನಸಭೆಯ ವಿಧೇಯಕ ಸಂಖ್ಯೆ: 3, ಕಡತ ಸಂಖ್ಯೆ:ಸಂವ್ಯಶಾಇ 24 ಶಾಸನ 2010)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೇ ಮತ್ತು 32ನೇ ನಮೂದನೆಗಳಡಿಯಲ್ಲಿ ಬರುತ್ತದೆ.)

– – –

**2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 18**

(2003 ರ ಏಪ್ರಿಲ್ ಹದಿನಾರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ, 2002**

(2003ರ ಏಪ್ರಿಲ್ ಒಂಭತ್ತನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

(2011ರ ಫೆಬ್ರವರಿ ನಾಲ್ಕನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

(2011ರ ಅಧಿನಿಯಮ ಸಂಖ್ಯೆ 10ರಲ್ಲಿ ತಿದ್ದುಪಡಿಯಾದಂತೆ)

ಹಂಪಿಯ ಎಲ್ಲಾ ಪುರಾತತ್ವ ಅವಶೇಷಗಳ ಮತ್ತು ನೈಸರ್ಗಿಕ ಪರಿಸರಗಳೊಂದಿಗೆ ಅದರ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವುದಕ್ಕಾಗಿ, ಕರ್ನಾಟಕ ರಾಜ್ಯದಲ್ಲಿ ಅದರ ಸಾಂಸ್ಕೃತಿಕ ಸಮಗ್ರತೆಯನ್ನು ರಕ್ಷಿಸುವುದಕ್ಕಾಗಿ ಮತ್ತು ಹಂಪಿ ವಿಶ್ವ ಪರಂಪರೆ ಪ್ರದೇಶದ ಸಮರ್ಥ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರವನ್ನು ರಚಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಈ ಮುಂದಿನವುಗಳಿಗಾಗಿ ಎಂದರೆ:-

(ಎ) ಹಂಪಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಸಾಂಸ್ಕೃತಿಕ ಪರಂಪರೆ ಮತ್ತು ನೈಸರ್ಗಿಕ ಪರಿಸರಗಳ ಸಂರಕ್ಷಣೆಗಾಗಿ;

(ಬಿ) ವಿಶ್ವ ಪರಂಪರೆಯ ಕೇಂದ್ರವಾಗಿ ಹಂಪಿಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಮಗ್ರತೆಯ ರಕ್ಷಣೆಗಾಗಿ,

(ಸಿ) ಆ ಪ್ರದೇಶದ ಅನಿಯಂತ್ರಿತ ಅಭಿವೃದ್ಧಿಯನ್ನು ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಅದರ ಬಳಕೆಯನ್ನು ತಡೆಯುವುದಕ್ಕಾಗಿ;

(ಡಿ) ಮೇಲ್ಕಂಡ ಉದ್ದೇಶಗಳಿಗೆ ಅನುಕೂಲಕರವಾಗುವಂತೆ ಆ ಪ್ರದೇಶದ ಸಮರ್ಥ ಅಭಿವೃದ್ಧಿಗಾಗಿ; ಮತ್ತು

(ಇ) ಇವುಗಳಿಗೆ ಪ್ರಾಸಂಗಿಕವಾದ ವಿಷಯಗಳಿಗಾಗಿ,

ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

## ಅಧ್ಯಾಯ - I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ, 2002 ಎಂದು ಕರೆಯತಕ್ಕದ್ದು.

(2) ಇದು, ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

[1][(ಎ) XXX][1]

1. 2011ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿ: 09.02.2011 ರಿಂದ ಬಿಟ್ಟುಬಿಡತಕ್ಕದ್ದು.

(ಬಿ) 'ಸೌಕರ್ಯ' ಎಂಬುದು ರಸ್ತೆಗಳು, ಸೇತುವೆಗಳು, ಬೀದಿಗಳು, ಸಾರಿಗೆ, ದೀಪದ ವ್ಯವಸ್ಥೆ, ನೀರು ಮತ್ತು ವಿದ್ಯುಚ್ಛಕ್ತಿ ಸರಬರಾಜು, ಒಳಚರಂಡಿ ವ್ಯವಸ್ಥೆ, ಚರಂಡಿ ವ್ಯವಸ್ಥೆ, ಲೋಕೋಪಯೋಗಿ ಕಾಮಗಾರಿಗಳು, ಖಾಲಿ ಜಾಗಗಳು, ಮನೋರಂಜನಾ ಮೈದಾನಗಳು, ಉದ್ಯಾನಗಳು ಮತ್ತು ಇತರ ಅನುಕೂಲಗಳು, ಸೇವೆಗಳು ಅಥವಾ ಬಳಕೆಗಳು, ಇವುಗಳನ್ನು ಒಳಗೊಳ್ಳುತ್ತದೆ;

(ಸಿ) 'ಗೊತ್ತುಪಡಿಸಿದ ದಿನಾಂಕ' ಎಂದರೆ, ಅಧಿನಿಯಮದ ಯಾವುದೇ ಅಥವಾ ಎಲ್ಲಾ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ಗೊತ್ತುಪಡಿಸಿದ ದಿನಾಂಕ;

(ಡಿ) 'ಪ್ರಾಧಿಕಾರ' ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಹಂಪಿ ವಿಶ್ವ ಪರಂಪರೆಯ ಪ್ರದೇಶ ನಿರ್ವಹಣಾ ಪ್ರಾಧಿಕಾರ;

(ಇ) 'ರಕ್ಷಾ ವಲಯ' ಎಂದರೆ, ಅನುಸೂಚಿಯ ಬಿ-ಭಾಗದಲ್ಲಿ ನಿರ್ದಿಷ್ಟಪಡಿಸಲಾದ ಪ್ರದೇಶ;

(ಎಫ್) 'ಅಧ್ಯಕ್ಷರು' ಎಂದರೆ, ಪ್ರಾಧಿಕಾರದ ಅಧ್ಯಕ್ಷರು;

(ಜಿ) 'ಆಯುಕ್ತ' ಎಂದರೆ, 7ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಪ್ರಾಧಿಕಾರದ ಆಯುಕ್ತ;

(ಹೆಚ್) 'ಕೋರ್ ಪ್ರದೇಶ ವಲಯ' ಎಂದರೆ ಅನುಸೂಚಿಯ ಎ-ಭಾಗದಲ್ಲಿ ನಿರ್ದಿಷ್ಟಪಡಿಸಲಾದ ಪ್ರದೇಶ;

(ಐ) 'ಸಾಂಸ್ಕೃತಿಕ ಪರಂಪರೆ' ಎಂದರೆ, ಭಾರತ ಪುರಾತತ್ವ ಸರ್ವೇಕ್ಷಣ ಇಲಾಖೆ ಮತ್ತು ರಾಜ್ಯ ಪುರಾತತ್ವ ಇಲಾಖೆಯು ಸಂರಕ್ಷಿಸುತ್ತಿರುವ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನ, ಕೃಷ್ಣ ದೇವಸ್ಥಾನ, ಅಚ್ಯುತರಾಯ ದೇವಸ್ಥಾನ, ವಿಠಲ ದೇವಸ್ಥಾನ, ಹಜಾರರಾಮ ದೇವಸ್ಥಾನ, ಗಣೇಶ, ಉಗ್ರನರಸಿಂಹ ಮತ್ತು ವೀರಭದ್ರ ಏಕಶಿಲಾ ವಿಗ್ರಹಗಳು ಮತ್ತು ಜೈನ ದೇವಸ್ಥಾನಗಳು, ಮಹಮ್ಮದೀಯರ ಗೋರಿಗಳು, ಮಸೀದಿಗಳು ಮತ್ತು ಇತರ ಸ್ಮಾರಕಗಳು ಮತ್ತು ಇವುಗಳು ಒಳಗೊಳ್ಳುತ್ತವೆ;

(ಜೆ) ವ್ಯಾಕರಣ ವ್ಯತ್ಯಾಸಗಳೊಂದಿಗೆ 'ಅಭಿವೃದ್ಧಿ' ಎಂದರೆ, ಯಾವುದೇ ಭೂಮಿಯಲ್ಲಿ ಅಥವಾ ಅದರ ಮೇಲೆ ಅಥವಾ ಅದರ ಕೆಳಗೆ ಕೈಗೊಳ್ಳುವ ಕಟ್ಟಡ, ಇಂಜಿನಿಯರಿಂಗ್ ಅಥವಾ ಇತರ ಕಾರ್ಯಾಚರಣೆಗಳು ಅಥವಾ ಯಾವುದೇ ಕಟ್ಟಡದಲ್ಲಿ ಅಥವಾ ಭೂಮಿಯಲ್ಲಿ ಅಥವಾ ಯಾವುದೇ ಕಟ್ಟಡ ಅಥವಾ ಭೂಮಿಯ ಬಳಕೆಯಲ್ಲಿ ಯಾವುದೇ ಮುಖ್ಯ ಬದಲಾವಣೆ ಮಾಡುವುದು ಮತ್ತು ಇದರಲ್ಲಿ ಸೌಲಭ್ಯಗಳೂ ಒಳಗೊಂಡಂತೆ ಪುನರಭಿವೃದ್ಧಿ ಮಾಡುವುದು ಮತ್ತು ಲೇಔಟ್‌ಗಳ ರಚನೆ ಮಾಡುವುದು ಮತ್ತು ಯಾವುದೇ ಭೂಮಿಯ ಒಳ ವಿಭಾಗ ಮಾಡುವುದು ಒಳಗೊಳ್ಳುತ್ತದೆ;

(ಕೆ) 'ನಿಧಿ' ಎಂದರೆ, ಪ್ರಾಧಿಕಾರದ ನಿಧಿ;

(ಎಲ್) 'ಪರಂಪರೆ ಪ್ರದೇಶ' ಎಂದರೆ, ಕೋರ್ ಪ್ರದೇಶ ವಲಯ, ರಕ್ಷಾ ವಲಯ ಮತ್ತು ಹೊರ ವಲಯಗಳು ಒಳಗೊಂಡಂತೆ ಆದರೆ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಅವಶೇಷಗಳ ಅಧಿನಿಯಮ, 1958ರ (1958ರ ಕೇಂದ್ರ ಅಧಿನಿಯಮ 24) ಅಡಿಯಲ್ಲಿ ಪರಿರಕ್ಷಿತ ಪ್ರದೇಶವೆಂದು ಉಲ್ಲೇಖಿಸಲಾದ ಪ್ರದೇಶವನ್ನು ಹೊರತುಪಡಿಸಿದಂತೆ ಸಂಪೂರ್ಣ ಪ್ರದೇಶ;

(ಎಮ್) 'ಸ್ಥಳೀಯ ಪ್ರಾಧಿಕಾರ' ಎಂದರೆ, ನಗರ ಪಾಲಿಕೆ, ಪೌರಸಭೆ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಟೌನ್ ಪಂಚಾಯಿತಿ ಮತ್ತು ಯಾವುದರ ಸ್ಥಳೀಯ ಪರಿಮಿತಿಗಳೊಳಗಿನ ಯಾವುದೇ ಭೂಮಿಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ಸಿದ್ಧಪಡಿಸಿದ ಅಥವಾ

ಸಿದ್ಧಪಡಿಸಲಾಗುವ ಒಂದು ಯೋಜನೆಯ ಪ್ರದೇಶದಲ್ಲಿ ಬರುವ ಸಂದರ್ಭದಲ್ಲಿ ಆ ಸ್ಥಳೀಯ ಪ್ರಾಧಿಕಾರವು 'ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವಾಗುತ್ತದೆ';

(ಎನ್) 'ಭೂಮಿ' ಎಂಬುದು, ಭೂಮಿಯಿಂದ ಮತ್ತು ಭೂಮಿಗೆ ಸೇರಿಕೊಂಡಿರುವ ವಸ್ತುಗಳಿಂದ ಅಥವಾ ಭೂಮಿಗೆ ಸೇರಿಕೊಂಡಿರುವ ಯಾವುದೇ ವಸ್ತುವಿಗೆ ಸ್ಥಿರವಾಗಿ ಜೋಡಿಸಿ ಕೊಂಡಿರುವ ವಸ್ತುವಿನಿಂದ ದೊರೆಯುವ ಪ್ರಯೋಜನಗಳನ್ನು ಒಳಗೊಳ್ಳುತ್ತದೆ;

(ಓ) 'ನೈಸರ್ಗಿಕ ಪರಿಸರಗಳು' ಎಂಬುದು ಪರಂಪರೆ ಪ್ರದೇಶದಲ್ಲಿ ಇರುವ ನದಿಗಳು, ನದಿ ಪಾತ್ರಗಳು, ಬಂಡೆಗಳು, ಜಲ ಸಂಪನ್ಮೂಲಗಳು, ವನ್ಯಮೃಗ ಮತ್ತು ಸಸ್ಯ ಸಂಪತ್ತು ಇತ್ಯಾದಿಗಳನ್ನು ಒಳಗೊಳ್ಳುತ್ತದೆ;

(ಪಿ) 'ಹೊರ ಪ್ರದೇಶ ವಲಯ' ಎಂದರೆ, ಅನುಸೂಚಿಯ ಸಿ-ಭಾಗದಲ್ಲಿ ನಿರ್ದಿಷ್ಟಪಡಿಸಲಾದ ಪ್ರದೇಶ;

(ಕ್ಯೂ) 'ಅನುಸೂಚಿ' ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ.

[1][(ಆರ್) "ರಾಜ್ಯಮಟ್ಟದ ಸಮಿತಿ" ಎಂದರೆ, 6ನೇ ಪ್ರಕರಣದ ಅಡಿಯಲ್ಲಿ ಸ್ಥಾಪನೆಯಾದ ಸಮಿತಿ;][1]

1. 2011ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿ: 09.02.2011 ರಿಂದ ಸೇರಿಸತಕ್ಕದ್ದು.

(2) ಈ ಅಧಿನಿಯಮದಲ್ಲಿ ಬಳಸಿದ ಆದರೆ ಪರಿಭಾಷಿಸಿರದ ಇತರ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ, 11) ರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – II

## ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ

**3. ಪ್ರಾಧಿಕಾರವನ್ನು ರಚಿಸುವುದು ಮತ್ತು ನಿಗಮಿತಗೊಳಿಸುವುದು.**- (1) ಈ ಅಧಿನಿಯಮದ ಉದ್ದೇಶಕ್ಕಾಗಿ, ಗೊತ್ತುಪಡಿಸಿದ ದಿನಾಂಕದ ತರುವಾಯ ಆದಷ್ಟುಬೇಗನೆ, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರವೆಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ, ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಹಾಗೂ ಸದರಿ ಹೆಸರಿನಿಂದ ದಾವೆ ಹೂಡುವ ಅಥವಾ ದಾವೆಗೊಳಗಾಗುವ ಅಧಿಕಾರವಿರುವ ಮತ್ತು ನಿರಂತರ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಮೇಲ್ಕಂಡ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು.

(3) ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ – ಅಧ್ಯಕ್ಷರು

(ಬಿ) ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ – ಉಪಾಧ್ಯಕ್ಷರು

(ಸಿ) ಪುರಾತತ್ವ ಮತ್ತು ವಸ್ತುಸಂಗ್ರಹಾಲಯದ ನಿರ್ದೇಶಕ

(ಡಿ) ಪಟ್ಟಣ ಯೋಜನೆಯ ನಿರ್ದೇಶಕ, ಬೆಂಗಳೂರು

(ಇ) ಪ್ರವಾಸೋದ್ಯಮ ನಿರ್ದೇಶಕ, ಬೆಂಗಳೂರು

(ಎಫ್) ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಬಳ್ಳಾರಿ

(ಜಿ) ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಕೊಪ್ಪಳ

(ಹೆಚ್) ಅಧೀಕ್ಷಕ ಪುರಾತತ್ವಜ್ಞ, ಭಾರತ ಪುರಾತತ್ವ ಸರ್ವೇಕ್ಷಣೆ, ಬೆಂಗಳೂರು ವೃತ್ತ, ಬೆಂಗಳೂರು.

(ಐ) ಅಧೀಕ್ಷಕ ಪುರಾತತ್ವಜ್ಞ, ಭಾರತ ಪುರಾತತ್ವ ಸರ್ವೇಕ್ಷಣೆ, ಧಾರವಾಡ ವೃತ್ತ, ಧಾರವಾಡ.

(ಜೆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ

(ಕೆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೊಪ್ಪಳ

(ಎಲ್) ಅರಣ್ಯ ಉಪ ಸಂರಕ್ಷಕ, ಬಳ್ಳಾರಿ

(ಎಮ್) ಅರಣ್ಯ ಉಪ ಸಂರಕ್ಷಕ, ಕೊಪ್ಪಳ

(ಎನ್) ಆಯುಕ್ತ, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ

(ಓ) ಸೂಪರಿಂಟೆಂಡಿಂಗ್ ಇಂಜಿನಿಯರ್, ಬಳ್ಳಾರಿ ವೃತ್ತ, ಬಳ್ಳಾರಿ

(ಪಿ) ಉಪ ಪರಿಸರ ಅಧಿಕಾರಿ, ಬಳ್ಳಾರಿ

(ಕ್ಯೂ) ಕಾರ್ಯನಿರ್ವಾಹಕ ಇಂಜಿನಿಯರ್, ನೀರಾವರಿ ಇಲಾಖೆ, ಮುನಿರಾಬಾದ್

(ಆರ್) ಪುರಾತತ್ವ ವಿಭಾಗದ ಮುಖ್ಯಸ್ಥ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

(ಎಸ್) ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನ ಮತ್ತು ಇತರ ಸಂಬಂಧಿತ ದೇವಸ್ಥಾನಗಳು, ಹಂಪಿ.

(ಟಿ) ಪ್ರಾಧಿಕಾರದ ಆಯುಕ್ತ, - ಸದಸ್ಯ ಕಾರ್ಯದರ್ಶಿ

(4) ಪ್ರಾಧಿಕಾರದ ಕೇಂದ್ರ ಕಚೇರಿಯು ಹೊಸಪೇಟೆಯಲ್ಲಿ ಇರತಕ್ಕದ್ದು.

**4. ಪ್ರಾಧಿಕಾರದ ಸಭೆಗಳು.**- ಪ್ರಾಧಿಕಾರದ ಅಧ್ಯಕ್ಷರು ಅಥವಾ ಅಧ್ಯಕ್ಷರ ಸ್ಪಷ್ಟ ಅನುಮೋದನೆಯೊಡನೆ ಆಯುಕ್ತರು ಸಭೆ ಕರೆಯತಕ್ಕದ್ದು ಮತ್ತು ಅದು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಇರುವ ಮತ್ತು ಅಧ್ಯಕ್ಷರು ನಿರ್ಧರಿಸುವ ಅಂಥ ಸ್ಥಳದಲ್ಲಿ ಅಥವಾ ಪ್ರಾಧಿಕಾರದ ಕೇಂದ್ರ ಕಾರ್ಯಸ್ಥಾನದಲ್ಲಿ ಹಾಗೂ ಅಂಥ ಸಮಯದಲ್ಲಿ ಸಾಮಾನ್ಯವಾಗಿ ಕನಿಷ್ಠ ಮೂರು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದ್ದು.

(2) ಪ್ರಾಧಿಕಾರವು ತನ್ನ ಸಭೆಗಳಲ್ಲಿ ಕಾರ್ಯಕಲಾಪ ನಿರ್ವಹಣೆಯ ಸಂಬಂಧದಲ್ಲಿ (ಸಭೆಯಲ್ಲಿ ಕೋರಂ ಒಳಗೊಂಡಂತೆ) ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ನಿಯಮಗಳನ್ನು ಪಾಲಿಸತಕ್ಕದ್ದು.

(3) ಅಧ್ಯಕ್ಷರು ಅಥವಾ ಯಾವುದೇ ಕಾರಣಕ್ಕಾಗಿ ಯಾವುದೇ ಸಭೆಗೆ ಹಾಜರಾಗಲು ಅವರು ಅಸಮರ್ಥರಾದರೆ, ಉಪಾಧ್ಯಕ್ಷರು ಅಥವಾ ಯಾವುದೇ ಕಾರಣಕ್ಕಾಗಿ ಸಭೆಗೆ ಹಾಜರಾಗಲು ಅವರೂ ಕೂಡ ಅಸಮರ್ಥರಾದರೆ, ಸಭೆಯಲ್ಲಿ ಹಾಜರಿದ್ದ ಸದಸ್ಯರು ಆಯ್ಕೆ ಮಾಡಿದ ಯಾವೊಬ್ಬ ಇತರ ಸದಸ್ಯನು ಪ್ರಾಧಿಕಾರದ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ಪ್ರಾಧಿಕಾರದ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹುಮತದಿಂದ ನಿರ್ಧರಿಸತಕ್ಕದ್ದು ಮತ್ತು ಸಮಾನ ಮತಗಳು ಬಂದ ಪ್ರಸಂಗದಲ್ಲಿ, ಅಧ್ಯಕ್ಷರು ಅಥವಾ ಅವರ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು, ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

(5) ಸದಸ್ಯನು, ಪ್ರಾಧಿಕಾರದ ಅಥವಾ ಅದರ ಸಮಿತಿಯ ಯಾವುದೇ ಸಭೆಯಲ್ಲಿ ತಾನೇ ಸ್ವತಃ ಅಥವಾ ಪಾಲುದಾರನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಷೇರು ಅಥವಾ ಹಿತಾಸಕ್ತಿ ಹೊಂದಿರುವ ಯಾವುದೇ ವಿಷಯದ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ ಅಥವಾ ಆ ವಿಷಯದ ಮೇಲೆ ಮತ ನೀಡತಕ್ಕದ್ದಲ್ಲ.

**5. ಪ್ರಾಧಿಕಾರ ಭದ್ರತಾ ದಳ.**- (1) ಪ್ರಾಧಿಕಾರ ಭದ್ರತಾ ದಳ ಎಂಬ ಹೆಸರಿನ ಒಂದು ದಳವನ್ನು,-

(i)ಅತಿಕ್ರಮಣವನ್ನು ತಡೆಗಟ್ಟುವುದು ಹಾಗೂ ಅದನ್ನು ಒಳಗೊಂಡಂತೆ ಪರಂಪರೆ ಪ್ರದೇಶದೊಳಗಿರುವ ಸಾರ್ವಜನಿಕ ಸ್ವತ್ತಿನ, ಉತ್ತಮ ರಕ್ಷಣೆ ಮತ್ತು ಭದ್ರತೆಗಾಗಿ;

(ii)ರಾಜಸ್ವದ ಸೋರಿಕೆಗೆ ಅಥವಾ ಪ್ರಾಧಿಕಾರಕ್ಕೆ ಸಂದಾಯವಾಗಬೇಕಾದ ಯಾವುದೇ ಮೊತ್ತಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನು ಪತ್ತೆ ಹಚ್ಚಲು ಮತ್ತು ತನಿಖೆ ನಡೆಸಲು ಪ್ರಾಧಿಕಾರದ ಅಧಿಕಾರಿಗಳಿಗೆ ಸಹಾಯ ಮಾಡುವುದಕ್ಕಾಗಿ;

(iii)ಈ ಅಧಿನಿಯಮದ ಅಥವಾ ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆ ಅಧಿನಿಯಮ, 1961 ಅಥವಾ ಅವುಗಳ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಆದೇಶದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯು ಯಾವುದೇ ಅಪರಾಧ ಮಾಡಲು ಯಾವುದೇ ಸಂಚು ಹೂಡಿರುವ ಅಥವಾ ಮಾಡಿರುವ ಸಂಬಂಧದಲ್ಲಿ ಪರಿಣಾಮಕಾರಿಯಾಗಿ ಸಂಪರ್ಕ ಪಡೆಯುವುದಕ್ಕಾಗಿ ಮತ್ತು ಯಾವುದೇ ಮಾಹಿತಿಯನ್ನು ಪಡೆಯುವುದಕ್ಕಾಗಿ;

(iv)ನಿಯಮಿಸಬಹುದಾದಂತೆ ಅಂಥ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ,

– ರಚಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಪ್ರಾಧಿಕಾರ ಭದ್ರತಾ ದಳವು ಪ್ರಾಧಿಕಾರವು ತೀರ್ಮಾನಿಸಬಹುದಾದಂತೆ ಅಂಥ ಸಂಖ್ಯೆಯ ಮೇಲ್ವಿಚಾರಣಾ ಅಧಿಕಾರಿಗಳು ಮತ್ತು ಸದಸ್ಯರನ್ನು ಹೊಂದಿರತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅವರನ್ನು ಒದಗಿಸತಕ್ಕದ್ದು.

(3) ಅಧ್ಯಕ್ಷರು ಪ್ರಾಧಿಕಾರ ಭದ್ರತಾ ದಳದ ಮೇಲೆ ಅಧೀಕ್ಷಣೆ ಹಾಗೂ ನಿಯಂತ್ರಣ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**6.** [1][**ರಾಜ್ಯಮಟ್ಟದ ಸಮಿತಿ**][1].– (1) ಈ ಮುಂದಿನ ಸದಸ್ಯರುಗಳನ್ನು ಒಳಗೊಂಡ ಒಂದು [1][ರಾಜ್ಯಮಟ್ಟದ ಸಮಿತಿ][1] ಇರತಕ್ಕದ್ದು, ಎಂದರೆ:–

[1][(ಎ) ಮುಖ್ಯಮಂತ್ರಿ -- ಅಧ್ಯಕ್ಷರು

(ಎಎ) ಬಳ್ಳಾರಿ ಜಿಲ್ಲೆಯ ಪ್ರಭಾರದಲ್ಲಿರುವ ಸಚಿವರು --ಸಹ ಅಧ್ಯಕ್ಷರು

(ಬಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸಚಿವರು -- ಸದಸ್ಯರು][1]

(ಸಿ) ಪ್ರವಾಸೋದ್ಯಮದ ಪ್ರಭಾರದಲ್ಲಿರುವ ಸಚಿವರು.

(ಡಿ) ಯಾರ ಚುನಾವಣಾ ಕ್ಷೇತ್ರಗಳು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವವೋ, ಪರಂಪರೆ ಪ್ರದೇಶವನ್ನು ಭಾಗಶಃ ಅಥವಾ ಪೂರ್ಣವಾಗಿ ಪ್ರತಿನಿದಿಸುವ ಸಂಸತ್ತಿನ ಮತ್ತು ರಾಜ್ಯ ವಿಧಾನ ಮಂಡಲದ ಆ ಸದಸ್ಯರು.

(ಇ) ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ.

(ಎಫ್) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ – ಸದಸ್ಯ–ಕಾರ್ಯದರ್ಶಿ

(ಜಿ) ಭಾರತ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಮಹಾನಿರ್ದೇಶಕರು ಅಥವಾ ಅವರ ನಾಮನಿರ್ದೇಶಿತರು.

(ಹೆಚ್) ಆರ್ಥಿಕ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ.

(ಐ) ಪ್ರವಾಸೋದ್ಯಮ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ.

(ಜೆ) ಪ್ರಾಧಿಕಾರದ ಅಧ್ಯಕ್ಷರು.

(ಕೆ) ನಗರ ಯೋಜನೆಯ ನಿರ್ದೇಶಕ, ಕರ್ನಾಟಕ ಸರ್ಕಾರ.

(2) [1][ರಾಜ್ಯಮಟ್ಟದ ಸಮಿತಿಯು][1] ಪರಂಪರೆ, ಪುರಾತತ್ವ, ಪ್ರವಾಸೋದ್ಯಮ ಅಥವಾ ಪರಿಸರ ಕ್ಷೇತ್ರಗಳಲ್ಲಿಯ ತಜ್ಞರಾದ ಮೂರು ವ್ಯಕ್ತಿಗಳನ್ನು ಸಹ-ಆಯ್ಕೆ ಮಾಡಿಕೊಳ್ಳಬಹುದು.

(3) [1][ರಾಜ್ಯಮಟ್ಟದ ಸಮಿತಿಯು][1], ಅದು ಅವಶ್ಯಕವೆಂದು ಭಾವಿಸಿದರೆ ಪರಂಪರೆ, ಪುರಾತತ್ವ, ಪ್ರವಾಸೋದ್ಯಮ ಅಥವಾ ಪರಿಸರ ಕ್ಷೇತ್ರದಲ್ಲಿ ತಜ್ಞನಾದ ಯಾವೊಬ್ಬ ವ್ಯಕ್ತಿಯನ್ನು ಆಹ್ವಾನಿಸಬಹುದು.

(4) [1][ರಾಜ್ಯಮಟ್ಟದ ಸಮಿತಿಯು][1], ಪ್ರಾಧಿಕಾರದ ಚಟುವಟಿಕೆಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಮೇಲ್ವಿಚಾರಣೆಮಾಡತಕ್ಕದ್ದು ಮತ್ತು ಪರಂಪರೆ ಪ್ರದೇಶದೊಳಗಿನ ಸಾಂಸ್ಕೃತಿಕ ಪರಂಪರೆ ಮತ್ತು ಪ್ರಾಕೃತಿಕ ಪರಿಸರಗಳ ಸಂರಕ್ಷಣೆಯ ಸಂಬಂಧದಲ್ಲಿಯ ಎಲ್ಲಾ ವಿಷಯಗಳ ಮೇಲೆ ಪ್ರಾಧಿಕಾರಕ್ಕೆ ಸಲಹೆ ನೀಡತಕ್ಕದ್ದು.

(5) [1][ರಾಜ್ಯಮಟ್ಟದ ಸಮಿತಿಯು][1], ನಿಯಮಿಸಬಹುದಾದಂತೆ ಅಂಥ ಸ್ಥಳದಲ್ಲಿ ಮತ್ತು ಅಂಥ ಸಮಯದಲ್ಲಿ ಕನಿಷ್ಠ ಪಕ್ಷ ಆರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು ಮತ್ತು ಅಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

1. 2011ರ ಅಧಿನಿಯಮ ಸಂಖ್ಯೆ: 10ರ ಮೂಲಕ ದಿ: 09.02.2011 ರಿಂದ ಪ್ರತಿಯೋಜಿಸತಕ್ಕದ್ದು.

## ಅಧ್ಯಾಯ - III

## ಪ್ರಾಧಿಕಾರದ ಅಧಿಕಾರಿಗಳು ಮತ್ತು ಅವರ ಕರ್ತವ್ಯಗಳು

**7. ಆಯುಕ್ತನ ನೇಮಕ.-** ರಾಜ್ಯ ಸರ್ಕಾರವು, ಒಬ್ಬ ರಾಜ್ಯ ಸಿವಿಲ್ ಸೇವಾ ಅಧಿಕಾರಿಯನ್ನು ಅಥವಾ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಬಗ್ಗೆ ಪರಿಜ್ಞಾನವಿರುವ, ವಿಶ್ವವಿದ್ಯಾನಿಲಯದಲ್ಲಿ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದಲ್ಲಿ ಕೆಲಸ ಮಾಡುತ್ತಿರುವ ಯಾವೊಬ್ಬ ವ್ಯಕ್ತಿಯನ್ನು ಪ್ರಾಧಿಕಾರದ ಆಯುಕ್ತನನ್ನಾಗಿ ನೇಮಿಸತಕ್ಕದ್ದು.

**8. ಆಯುಕ್ತನ ಕರ್ತವ್ಯಗಳು.-** (1) ಆಯುಕ್ತನು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಆಡಳಿತಾಧಿಕಾರಿಯಾಗಿರತಕ್ಕದ್ದು.

(2) ಆಯುಕ್ತನು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ತನಗೆ ಪ್ರದತ್ತವಾದ ಅಂಥ ಪ್ರಕಾರ್ಯಗಳನ್ನು ನೆರವೇರಿಸುವುದರ ಜೊತೆಗೆ,-

(ಎ) ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರತಕ್ಕದ್ದು;

(ಬಿ) ಪ್ರಾಧಿಕಾರದ ಎಲ್ಲಾ ಹಣಕಾಸಿನ ಯೋಜನೆ, ಜಾರಿಗೊಳಿಸುವಿಕೆ ಮತ್ತು ಮೇಲ್ವಿಚಾರಣೆ ಪ್ರಕಾರ್ಯಗಳಿಗೆ ಜವಾಬ್ದಾರನಾಗಿರತಕ್ಕದ್ದು;

(ಸಿ) ಪ್ರಾಧಿಕಾರದ ಆಡಳಿತ ಮತ್ತು ಲೆಕ್ಕಪತ್ರಗಳಿಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಹಾಗೂ ಪ್ರಾಧಿಕಾರವು ಒದಗಿಸಲು ಕೋರಿದಾಗಲೆಲ್ಲ ಇತರ ವಿಷಯಗಳ ಮಾಹಿತಿಯನ್ನು ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು;

(ಡಿ) ಪ್ರತಿ ಆರ್ಥಿಕ ವರ್ಷವು ಮುಕ್ತಾಯವಾದ ಮೂರು ತಿಂಗಳುಗಳ ಒಳಗೆ ಪ್ರಾಧಿಕಾರದ ವಾರ್ಷಿಕ ವರದಿಗಳನ್ನು ಮತ್ತು ಪರಿಶೋಧಿತ ಲೆಕ್ಕಪತ್ರಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರ ಅನುಮೋದನೆಗಾಗಿ ಒಪ್ಪಿಸತಕ್ಕದ್ದು ಹಾಗೂ ತರುವಾಯ ಸದರಿ ಪ್ರತಿಗಳನ್ನು ಪ್ರಾಧಿಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು;

(ಇ) ನಿಯಮಿಸಬಹುದಾದಂತೆ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**9. ಯೋಜನಾಧಿಕಾರಿಯ ನೇಮಕ.**- (1) ರಾಜ್ಯ ಸರ್ಕಾರವು, ನಗರ ಯೋಜನೆಯ ಸಹಾಯಕ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ನಗರ ಯೋಜನಾ ಇಲಾಖೆಯ ಒಬ್ಬ ಅಧಿಕಾರಿಯನ್ನು ಯೋಜನಾಧಿಕಾರಿಯನ್ನಾಗಿ ನೇಮಿಸತಕ್ಕದ್ದು.

(2) ಯೋಜನಾಧಿಕಾರಿಯು ಆಯುಕ್ತನ ಮುಂದೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು ಮತ್ತು ನಿಯಮಿಸಬಹುದಾದಂತೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**10. ಲೆಕ್ಕಪತ್ರಾಧಿಕಾರಿ ಮುಂತಾದವರ ನೇಮಕ.**- (1) ರಾಜ್ಯ ಸರ್ಕಾರವು, ರಾಜ್ಯ ಲೆಕ್ಕಪತ್ರಗಳ ಸೇವೆಯ ಗ್ರೂಪ್ 'ಎ' (ಕಿರಿಯ ಶ್ರೇಣಿಯ) ಅಧಿಕಾರಿಯ ದರ್ಜೆಗೆ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು ಪ್ರಾಧಿಕಾರದ ಲೆಕ್ಕಪತ್ರಾಧಿಕಾರಿಯನ್ನಾಗಿ ನೇಮಿಸತಕ್ಕದ್ದು.

(2) ಲೆಕ್ಕಪತ್ರಾಧಿಕಾರಿಯು ಆಯುಕ್ತನ ಮುಂದೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಪ್ರಾಧಿಕಾರಕ್ಕೆ ಅವಶ್ಯಕವಾಗಬಹುದಾದ ಅಂಥ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಒದಗಿಸತಕ್ಕದ್ದು. ಅಧಿಕಾರಿಗಳ ಮತ್ತು ಸಿಬ್ಬಂದಿಯ ಸೇವಾ ಷರತ್ತುಗಳು ಹಾಗೂ ಅಧಿಕಾರಗಳು ಮತ್ತು ಕರ್ತವ್ಯಗಳು ವಿನಿಯಮಗಳ ಮೂಲಕ ನಿರ್ಧರಿಸಲಾದಂತೆ ಇರತಕ್ಕದ್ದು.

(4) ಪ್ರಾಧಿಕಾರದ ಆಡಳಿತ ವೆಚ್ಚಗಳು, ಅಧಿಕಾರಿಗಳ ಮತ್ತು ಸಿಬ್ಬಂದಿಯ ವೇತನ ಮತ್ತು ಭತ್ಯೆಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

## ಅಧ್ಯಾಯ - IV

## ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು

**11. ಪ್ರಾಧಿಕಾರದ ಪ್ರಕಾರ್ಯಗಳು.**- ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಒಳಪಟ್ಟು, ಈ ಮುಂದಿನವುಗಳು ಪ್ರಾಧಿಕಾರದ ಪ್ರಕಾರ್ಯಗಳಾಗಿರತಕ್ಕದ್ದು ಎಂದರೆ,-

(i) ಪರಂಪರೆ ಪ್ರದೇಶದ ಸಮೀಕ್ಷೆಯನ್ನು ನಡೆಸುವುದು ಮತ್ತು ಹಾಗೆ ನಡೆಸಿದ ಸಮೀಕ್ಷೆಯ ಬಗ್ಗೆ ವರದಿಗಳನ್ನು ತಯಾರಿಸುವುದು;

(ii) ಪರಂಪರೆ ಪ್ರದೇಶದ ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು;

(iii)ಅಭಿವೃದ್ಧಿ ಯೋಜನೆಯಲ್ಲಿ ಉದ್ದೇಶಿಸಲಾದ ಅಂಥ ಕಾಮಗಾರಿಗಳನ್ನು ಕೈಗೊಳ್ಳುವಂತೆ ಮಾಡುವುದು;

(iv)ಪರಂಪರೆ ಪ್ರದೇಶದ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅವಶ್ಯವಾಗಬಹುದಾದಷ್ಟು ಸಂಖ್ಯೆಯ ಯೋಜನೆಗಳನ್ನು ರೂಪಿಸುವುದು;

(v) ಅಭಿವೃದ್ಧಿ ಯೋಜನೆಗಳ, ಪಟ್ಟಣ ಯೋಜನಾ ಸ್ಕೀಮುಗಳ ನಿರ್ವಹಣೆಯನ್ನು ಮತ್ತು ಸದರಿ ಯೋಜನೆ ಮತ್ತು ಸ್ಕೀಮುಗಳಿಗೆ ಅನುಸಾರವಾಗಿ ಪರಂಪರೆ ಪ್ರದೇಶದ ಅಭಿವೃದ್ಧಿಯ ನಿರ್ವಹಣೆಯನ್ನು ಸುನಿಶ್ಚಿತಗೊಳಿಸುವುದು ಮತ್ತು ಸಮನ್ವಯಗೊಳಿಸುವುದು;

(vi) ಪರಂಪರೆ ಪ್ರದೇಶದ ಅಭಿವೃದ್ಧಿಗಾಗಿನ ಯಾವುದೇ ಪ್ರಾಜೆಕ್ಟ್ ಅಥವಾ ಸ್ಕೀಮಿಗೆ ಹಣವನ್ನು ಎತ್ತುವುದು ಮತ್ತು ಅಂಥ ಪ್ರಾಜೆಕ್ಟ್ ಅಥವಾ ಸ್ಕೀಮಿನ ನಿರ್ವಹಣೆಗಾಗಿ ಆ ವಲಯದಲ್ಲಿಯ ಸ್ಥಳೀಯ ಪ್ರಾಧಿಕಾರಗಳಿಗೆ ನೆರವು ನೀಡುವುದು;

(vii) ರಾಜ್ಯ ಸರ್ಕಾರವು ವಹಿಸಬಹುದಾದ ಅಥವಾ ಅವಶ್ಯಕವಾಗಬಹುದಾದ ಅಥವಾ ಪ್ರಾಸಂಗಿಕವಾದ ಅಥವಾ ಪ್ರಾಧಿಕಾರವನ್ನು ರಚಿಸಿದ ಉದ್ದೇಶಗಳ ಮುನ್ನಡೆಗೆ ಅವಶ್ಯಕವಾದ ಯಾವುವೆ ವಿಷಯಗಳಿಗೆ ಅನುಕೂಲಕರವಾದ ಅಂಥ ಇತರ ಕಾರ್ಯಗಳು ಮತ್ತು ಕೃತ್ಯಗಳನ್ನು ಮಾಡುವುದು;

(viii) ಯಾವುದೇ ಅಭಿವೃದ್ಧಿ ಯೋಜನೆಯ ಅಥವಾ ಪಟ್ಟಣ ಯೋಜನಾ ಸ್ಕೀಮಿನ ಅಥವಾ ಪರಂಪರೆ ಪ್ರದೇಶದ ಅಭಿವೃದ್ಧಿಯ ನಿರ್ವಹಣಾ ಕಾಮಗಾರಿಯನ್ನು ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಏಜೆನ್ಸಿಗೆ ವಹಿಸಿಕೊಡುವುದು;

(ix) ಸ್ಥಳೀಯ ಪ್ರಾಧಿಕಾರಗಳ ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987ರ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರ ಯಾವುದಾದರೂ ಇದ್ದು ಅದು ಪರಂಪರೆ ಪ್ರದೇಶದ ಪರಿಮಿತಿಗಳಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿದ್ದರೆ ಅದರ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಲಿ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಲಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಪರಂಪರೆ ಪ್ರದೇಶದ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಥ ಇತರ ನಿಕಾಯಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದು;

(x) ಯೋಜನೆಯ ಅಡಿಯಲ್ಲಿ ವಹಿಸಿದ ವೆಚ್ಚದ ಪ್ರಗತಿಯ ಬಗ್ಗೆ ಹಾಗೂ ಯೋಜನೆಗೆ ಸಂಬಂಧಿಸಿದಂತೆ ವಿವಿಧ ಅಭಿವೃದ್ಧಿ ಇಲಾಖೆಗಳ ಮತ್ತು ಸ್ಥಳೀಯ ಪ್ರಾಧಿಕಾರ ಕಾರ್ಯನಿರ್ವಹಣೆಯ ಬಗ್ಗೆ ಮೇಲ್ವಿಚಾರಣೆ ನಡೆಸುವುದು ಮತ್ತು ಪುನರೀಕ್ಷಿಸುವುದು;

(xi) ಪರಂಪರೆ ಪ್ರದೇಶದೊಳಗಿನ ಸಾರ್ವಜನಿಕ ಸ್ವತ್ತನ್ನು ಸಂರಕ್ಷಿಸಲು ಕ್ರಮಕೈಕೊಳ್ಳುವುದು;

(xii) ಹಂಪಿ ವಿಶ್ವಪರಂಪರೆ ನಿವೇಶನದ ಮಹತ್ವದ ಬಗ್ಗೆ ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಅರಿವು ಮೂಡಿಸುವುದು;

(xiii) ಹಂಪಿ ವಿಶ್ವಪರಂಪರೆ ನಿವೇಶನದ, ಪುರಾತತ್ವ, ಐತಿಹಾಸಿಕ ಮತ್ತು ಪರಿಸರ ಮೌಲ್ಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಸೂಕ್ತ ಸಂಶೋಧನೆ ನಡೆಸಲು ಉತ್ತೇಜಿಸುವುದು ಮತ್ತು ಪ್ರೋತ್ಸಾಹಿಸುವುದು;

(xiv) ನಿಯಮಿಸಬಹುದಾದಂತೆ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು,

**12. ಅಧ್ಯಕ್ಷರ ವಿಶೇಷ ಅಧಿಕಾರಗಳು.**- ಪ್ರಾಧಿಕಾರದ ಸಭೆಯನ್ನು ಕರೆಯಲು ಸಾಕಷ್ಟು ಸಮಯವಿಲ್ಲದಿರುವ ತುರ್ತು ಸಂದರ್ಭಗಳಲ್ಲಿ ಉದ್ದೇಶಗಳ ಪರಿಣಾಮಕಾರಿ ಈಡೇರಿಕೆಗಾಗಿ ಸ್ವತಃ ಕಾರ್ಯ ಪ್ರವೃತ್ತವಾಗಲು ಮತ್ತು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲು ಅಧ್ಯಕ್ಷರಿಗೆ ವಿಶೇಷ ಅಧಿಕಾರವಿರತಕ್ಕದ್ದು, ಆದರೆ ಅವರು ಆ ವಿಷಯವನ್ನು ಪ್ರಾಧಿಕಾರದ ಮುಂದೆ, ಅದರ ತಕ್ಷಣ ಮುಂಬರುವ ಅದರ ಸಭೆಯಲ್ಲಿ ಮಂಡಿಸತಕ್ಕದ್ದು ಮತ್ತು ಅನುಸಮರ್ಥನೆಯನ್ನು ಕೋರತಕ್ಕದ್ದು.

**13. ಪ್ರತ್ಯಾಯೋಜನೆಗೆ ಅಧಿಕಾರ.**- ಪ್ರಾಧಿಕಾರವು, ಅಧಿಸೂಚನೆಯ ಮೂಲಕ, ಪರಿನಿಯಮಗಳ ರಚನಾಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಅಡಿಯಲ್ಲಿ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು, ಅಧ್ಯಕ್ಷರು ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಪ್ರಾಧಿಕಾರದ

ಅಂಥ ಅಧಿಕಾರಿಯು ಸಹ ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ನಿರ್ಬಂಧಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಚಲಾಯಿಸಲು ನಿರ್ದೇಶನ ನೀಡಬಹುದು.

**14. ಪ್ರಾಧಿಕಾರದ ಅನುಮತಿ ಇಲ್ಲದೆ ಯಾವುದೇ ಇತರ ಪ್ರಾಧಿಕಾರ ಅಥವಾ ವ್ಯಕ್ತಿಯು ಅಭಿವೃದ್ಧಿಯನ್ನು ಕೈಗೊಳ್ಳಕೂಡದು.**- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಪ್ರಾಧಿಕಾರದ ಪೂರ್ವಾನುಮತಿಯ ಹೊರತಾಗಿ ಅಲ್ಲದೆ, ಪರಂಪರೆ ಪ್ರದೇಶದೊಳಗೆ, ಪ್ರಾಧಿಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಣೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಮಾದರಿಗಳ ಯಾವುದೇ ಅಭಿವೃದ್ಧಿಯನ್ನು ಯಾವುದೇ ಇತರ ಪ್ರಾಧಿಕಾರ ಅಥವಾ ವ್ಯಕ್ತಿಯು ಕೈಗೊಳ್ಳತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಅಭಿವೃದ್ಧಿಗಾಗಿ, ಪರಂಪರೆ ಪ್ರದೇಶದೊಳಗೆ, ಅಂಥ ಅಭಿವೃದ್ಧಿಗಾಗಿ ಪ್ರಾಧಿಕಾರವು ಅನುಮತಿಯನ್ನು ನೀಡಿದ್ದ ಹೊರತು, ಯಾವುದೇ ಸ್ಥಳೀಯ ಪ್ರಾಧಿಕಾರವು ಅನುಮತಿಯನ್ನು ನೀಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಭಿವೃದ್ಧಿಯನ್ನು ಕೈಗೊಳ್ಳಲು ಇಚ್ಛಿಸುವ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯು ಅಂಥ ಅಭಿವೃದ್ಧಿಯನ್ನು ಕೈಗೊಳ್ಳಲು ಅನುಮತಿಯನ್ನು ಕೋರಿ ಲಿಖಿತದಲ್ಲಿ ಅರ್ಜಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(4) ಪ್ರಾಧಿಕಾರವು, ತಾನು ಅವಶ್ಯಕವೆಂದು ಭಾವಿಸುವ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ತಾನು ವಿಧಿಸುವುದು ಸೂಕ್ತವೆಂದು ಭಾವಿಸಬಹುದಾದ ಅಂಥ ಷರತ್ತುಗಳಿಲ್ಲದೆ ಅಥವಾ ಷರತ್ತುಗಳೊಡನೆ ಅಂಥ ಅನುಮತಿಯನ್ನು ನೀಡಬಹುದು ಅಥವಾ ಅಂಥ ಅನುಮತಿಯನ್ನು ನೀಡಲು ನಿರಾಕರಿಸಬಹುದು.

(5) (4)ನೇ ಉಪ ಪ್ರಕರಣದ ಅಡಿಯಲ್ಲಿಯ ಪ್ರಾಧಿಕಾರದ ತೀರ್ಮಾನದಿಂದ ಬಾಧಿತವಾದ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯು, ತೀರ್ಮಾನದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಂಥ ತೀರ್ಮಾನದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು, ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ಅಂಥ ಅಪೀಲನ್ನು ಸಲ್ಲಿಸುವ ಬಾಧಿತವಾದ ಪ್ರಾಧಿಕಾರವು, ಕೇಂದ್ರ ಸರ್ಕಾರದ ಆಡಳಿತ ನಿಯಂತ್ರಣದಲ್ಲಿದ್ದರೆ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸಿದ ತರುವಾಯ ಅಪೀಲನ್ನು ತೀರ್ಮಾನಿಸತಕ್ಕದ್ದು.

(6) ಯಾವೊಬ್ಬ ವ್ಯಕ್ತಿ ಅಥವಾ ಪ್ರಾಧಿಕಾರವು (5)ನೇ ಉಪ ಪ್ರಕರಣದಲ್ಲಿ ಮಾರ್ಪಡಿಸಲಾದಂತೆ (4)ನೇ ಉಪ ಪ್ರಕರಣದ ಅಡಿಯಲ್ಲಿ ನೀಡಿದ ತೀರ್ಮಾನಕ್ಕೆ ವಿರುದ್ಧವಾಗಿ ಯಾವುದೇ ಕಾರ್ಯವನ್ನು ಕೈಗೊಂಡಿದ್ದರೆ, ಅಂಥ ತೀರ್ಮಾನಕ್ಕೆ ವಿರುದ್ಧವಾಗಿ ಕೈಗೊಂಡ ಯಾವುದೇ ಅಭಿವೃದ್ಧಿಯನ್ನು ಕೆಡಹುವ, ನಾಶಪಡಿಸುವ ಅಥವಾ ತೆಗೆದುಹಾಕುವ ಅಧಿಕಾರವನ್ನು ಮತ್ತು ಅಂಥ ಕೆಡಹುವ, ನಾಶಪಡಿಸುವ ಅಥವಾ ತೆಗೆದುಹಾಕುವ ವೆಚ್ಚವನ್ನು ಸಂಬಂಧಪಟ್ಟ ವ್ಯಕ್ತಿಯಿಂದ ಅಥವಾ ಪ್ರಾಧಿಕಾರದಿಂದ ವಸೂಲ್ಮಾಡುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರತಕ್ಕದ್ದು.

**15. ಪ್ರವೇಶಕ್ಕೆ ಅಧಿಕಾರ.**- ಪ್ರಾಧಿಕಾರವು, ಯಾವುದೇ ಭೂಮಿ ಅಥವಾ ಕಟ್ಟಡವನ್ನು, ಕೆಲಸಗಾರರ ಸಹಾಯಪಡೆದು ಅಥವಾ ಸಹಾಯವನ್ನು ಪಡೆಯದೆ,

(ಎ) ಅಂಥ ಭೂಮಿ ಅಥವಾ ಕಟ್ಟಡಕ್ಕಾಗಿ ಯಾವುದೇ ವಿಚಾರಣೆ, ತಪಾಸಣೆ, ಅಳತೆ ಅಥವಾ ಸಮೀಕ್ಷೆ ಅಥವಾ ಮಟ್ಟಮಾಡುವ;

(ಬಿ) ನಿರ್ಮಾಣದಲ್ಲಿರುವ ಕಾಮಗಾರಿಗಳನ್ನು ಪರೀಕ್ಷಿಸುವ ಮತ್ತು ಒಳಚರಂಡಿ ಹಾಗೂ ಚರಂಡಿಗಳ ಮಾರ್ಗವನ್ನು ಖಚಿತಪಡಿಸಿಕೊಳ್ಳುವ;

(ಸಿ) ಒಳ ಮಣ್ಣಿನಲ್ಲಿ ತೋಡುವ ಅಥವಾ ಕೊರೆಯುವ;

(ಡಿ) ಕಾಮಗಾರಿಯ ಗಡಿಗಳನ್ನು ಮತ್ತು ಉದ್ದೇಶಿತ ರೇಖೆಗಳನ್ನು ಹಾಕುವ;

(ಇ) ಗುರುತುಗಳನ್ನು ಹಾಕುವ ಹಾಗೂ ಕಂದಕಗಳನ್ನು ತೋಡುವ ಮೂಲಕ ಅಂಥ ಮಟ್ಟಗಳನ್ನು, ಗಡಿಗಳನ್ನು ಮತ್ತು ರೇಖೆಗಳನ್ನು ಹಾಕುವ;

(ಎಫ್) ಯಾವುದೇ ಯೋಜನೆಯನ್ನು ಉಲ್ಲಂಘಿಸಿ ಅಥವಾ ಯಾವ ಷರತ್ತುಗಳಿಗೆ ಒಳಪಟ್ಟು ಅಂಥ ಅನುಮತಿಯನ್ನು ನೀಡಲಾಗಿತ್ತೋ ಆ ಷರತ್ತುಗಳನ್ನು ಉಲ್ಲಂಘಿಸಿ ಯಾವುದೇ ಭೂಮಿಯನ್ನು ಅಭಿವೃದ್ಧಿಪಡಿಸಲಾಗುತ್ತಿದೆಯೇ ಅಥವಾ ಅಭಿವೃದ್ಧಿಪಡಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ; ಅಥವಾ

(ಜಿ) ಈ ಅಧಿನಿಯಮದ ದಕ್ಷ ಆಡಳಿತಕ್ಕಾಗಿ ಅವಶ್ಯಕವಾದ ಇತರ ಯಾವುದೇ ಕಾರ್ಯಗಳನ್ನು ಮಾಡುವ,-

- ಉದ್ದೇಶಕ್ಕಾಗಿ ಪ್ರವೇಶಿಸಲು ಯಾವೊಬ್ಬ ವ್ಯಕ್ತಿಯನ್ನು ಪ್ರಾಧೀಕರಿಸಬಹುದು:

ಪರಂತು,

(i) ಸೂರ್ಯೋದಯ ಮತ್ತು ಸೂರ್ಯಾಸ್ತದೊಳಗಿನ ಅವಧಿಯ ಹೊರತಾಗಿ ಮತ್ತು ಅಧಿಭೋಗದಾರನಿಗೆ ಅಥವಾ ಅಲ್ಲಿ ಯಾವೊಬ್ಬ ಅಧಿಭೋಗದಾರನು ಇರದಿದ್ದರೆ ಭೂಮಿಯ ಅಥವಾ ಕಟ್ಟಡದ ಮಾಲೀಕನಿಗೆ ಸೂಕ್ತ ನೋಟೀಸನ್ನು ಕೊಡದೆ ಹಾಗೆ ಪ್ರವೇಶಿಸತಕ್ಕದ್ದಲ್ಲ;

(ii) ಮಹಿಳೆಯರು ಅಥವಾ ಮಕ್ಕಳು, ಯಾರಾದರೂ ಇದ್ದರೆ ಅವರು, ಅಂಥ ಭೂಮಿ ಅಥವಾ ಕಟ್ಟಡದಿಂದ ಹೊರ ಹೋಗಲು ಸಾಕಷ್ಟು ಅವಕಾಶವನ್ನು ಪ್ರತಿ ಸಂಧರ್ಭದಲ್ಲಿಯೂ ನೀಡತಕ್ಕದ್ದು;

(iii) ಸಾಧ್ಯವಾದಷ್ಟು ಮಟ್ಟಿಗೆ ಪ್ರವೇಶ ಮಾಡಿದ ಉದ್ದೇಶದ ಜರೂರು ಅವಶ್ಯಕತೆಗೆ ಅನುಗುಣವಾಗಿ, ಪ್ರವೇಶಿಸಿದ ಭೂಮಿ ಅಥವಾ ಕಟ್ಟಡದ ಅಧಿಭೋಗದಾರನ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗೆ ಯಾವಾಗಲೂ ಸೂಕ್ತ ಗಮನ ನೀಡತಕ್ಕದ್ದು.

**16. ಶುಲ್ಕ ವಿಧಿಸುವುದು.**- (1) 14ನೇ ಪ್ರಕರಣದ ಅಡಿಯಲ್ಲಿ ಅನುಮತಿಗಳ ನೀಡಿಕೆಗಾಗಿ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ, ಅಂಥ ದರದಲ್ಲಿ ಶುಲ್ಕವನ್ನು ವಿಧಿಸುವುದು ಪ್ರಾಧಿಕಾರಕ್ಕೆ ಕಾನೂನುಬದ್ಧವಾಗಿರತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಸಂಗ್ರಹಿಸಿದ ಎಲ್ಲಾ ಶುಲ್ಕಗಳನ್ನು ಪ್ರಾಧಿಕಾರದ ನಿಧಿಗೆ ಜಮಾ ಮಾಡತಕ್ಕದ್ದು.

**17. ಪ್ರಾಧಿಕಾರ ನಿಧಿ.**- (1) ಪ್ರಾಧಿಕಾರವು, 'ಪ್ರಾಧಿಕಾರ ನಿಧಿ' ಎಂದು ಕರೆಯಲಾಗುವ ಒಂದು ನಿಧಿಯನ್ನು ಹೊಂದಿರತಕ್ಕದ್ದು, ಇದನ್ನು ಪ್ರಾಧಿಕಾರವು ಪ್ರಾಧೀಕರಿಸಬಹುದಾದಂತೆ ಅಂಥ ಅಧಿಕಾರಿಗಳು ನಿರ್ವಹಿಸತಕ್ಕದ್ದು.

(2) ಪ್ರಾಧಿಕಾರವು, ಈ ಅಧಿನಿಯಮದ ಎಲ್ಲ ಅಥವಾ ಯಾವುವೆ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಯಾವುದೇ ಅಂತರರಾಷ್ಟ್ರೀಯ ಸಂಘ ಸಂಸ್ಥೆಯಿಂದ ಅಥವಾ

ಯಾವೊಬ್ಬ ವ್ಯಕ್ತಿಯಿಂದ ಅಥವಾ ನಿಗಮಿತವಾಗಿರುವ ಅಥವಾ ಆಗಿಲ್ಲದಿರುವ ಒಂದು ನಿಕಾಯದಿಂದ ಅನುದಾನಗಳು, ಧನ ಸಹಾಯಗಳು, ಕೊಡುಗೆಗಳು, ಕಾಣಿಕೆಗಳು ಮತ್ತು ದಾನಗಳನ್ನು ಸ್ವೀಕರಿಸಬಹುದು.

(3) ರಾಜ್ಯ ಸರ್ಕಾರವು, ಪ್ರಾಧಿಕಾರವು ಸ್ವಂತ ಸಂಪನ್ಮೂಲಗಳಿಂದ ತನ್ನ ಆಡಳಿತ ವೆಚ್ಚಗಳನ್ನು ಭರಿಸಲು ಸಮರ್ಥವಾಗುವವರೆಗೆ ಪ್ರಾಧಿಕಾರದ ಆಡಳಿತ ವೆಚ್ಚಗಳಿಗೆ ಸಮನಾದ ಮೊತ್ತದ ಅನುದಾನವನ್ನು ಪ್ರಾಧಿಕಾರಕ್ಕೆ ಪ್ರತಿವರ್ಷ ನೀಡತಕ್ಕದ್ದು.

(4) ಈ ಅಧಿನಿಯಮದ ಬಲದಿಂದ, ಪ್ರಾಧಿಕಾರವು ಅಥವಾ ಅದರ ಪರವಾಗಿ ಸ್ವೀಕರಿಸಿದ ಎಲ್ಲಾ ಹಣವನ್ನು ಮತ್ತು ಪ್ರಾಧಿಕಾರಕ್ಕೆ ಪ್ರಾಪ್ತವಾಗುವ ಎಲ್ಲಾ ಬಡ್ಡಿ, ಲಾಭ ಮತ್ತು ಸಾಲವಾಗಿ ಪಡೆದ ಹಣವನ್ನು ನಿಧಿಗೆ ಜಮೆ ಮಾಡತಕ್ಕದ್ದು.

(5) ರಾಜ್ಯ ಸರ್ಕಾರ ಅನ್ಯಥಾ ನಿರ್ದೇಶಿಸಿದ ಹೊರತಾಗಿ, ಪೂರ್ವೋಕ್ತ ಉಪಬಂಧಗಳಲ್ಲಿ ನಿರ್ದಿಷ್ಟಪಡಿಸಿದ ಮತ್ತು ನಿಧಿಯ ಭಾಗವಾಗುವ ಎಲ್ಲಾ ಹಣ ಮತ್ತು ಸ್ವೀಕೃತಿಗಳನ್ನು, ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರಲ್ಲಿ ಪರಿಭಾಷಿಸಿದಂತೆ ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು ಅಥವಾ ರಾಜ್ಯ ಸರ್ಕಾರವು ಅನುಮೋದಿಸಬಹುದಾದಂತೆ ಅಂಥ ಭದ್ರತೆಗಳಲ್ಲಿ ತೊಡಗಿಸಬಹುದು.

(6) ನಿಧಿಯನ್ನು ಮತ್ತು ಪ್ರಾಧಿಕಾರದಲ್ಲಿ ನಿಹಿತವಾಗುವ ಎಲ್ಲ ಇತರ ಸ್ವತ್ತುಗಳನ್ನು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮತ್ತು ಉದ್ದೇಶಗಳಿಗಾಗಿ ಅದು ಧಾರಣ ಮಾಡತಕ್ಕದ್ದು ಮತ್ತು ವಿನಿಯೋಗಿಸತಕ್ಕದ್ದು.

**18. ಬಜೆಟ್.**- ಪ್ರಾಧಿಕಾರವು, ನಿಯಮಿಸಬಹುದಾದಂತೆ ಅಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ, ಮುಂದಿನ ಆರ್ಥಿಕ ವರ್ಷದ ಸಂಬಂಧದಲ್ಲಿ, ಪ್ರಾಧಿಕಾರದ ಸ್ವೀಕೃತಿಗಳು ಮತ್ತು ಬಟವಾಡೆಗಳನ್ನು ತೋರಿಸುವ ವಾರ್ಷಿಕ ಬಜೆಟ್ ಅಂದಾಜನ್ನು ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಅದರ ಒಂದು ಪ್ರತಿಯನ್ನು ಸಲ್ಲಿಸತಕ್ಕದ್ದು.

**19. ವಾರ್ಷಿಕ ವರದಿ.**- ಪ್ರಾಧಿಕಾರವು, ಪ್ರತಿಯೊಂದು ವರ್ಷದ ಮುಕ್ತಾಯದ ತರುವಾಯ, ನಿಯಮಿಸಬಹುದಾದಂತೆ ಅಂಥ ನಮೂನೆಯಲ್ಲಿ ಮತ್ತು ಅಂಥ ದಿನಾಂಕದೊಳಗೆ, ಅಂಥ ವರ್ಷದಲ್ಲಿಯ ಅದರ ಕಾರ್ಯ ಚಟುವಟಿಕೆಗಳ ಒಂದು ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು, ಅಂಥ ವರದಿಯ ಒಂದು ಪ್ರತಿಯನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**20. ಪ್ರಾಧಿಕಾರಕ್ಕೆ ಧನ ಸಹಾಯ ಮತ್ತು ಸಾಲಗಳು.**- (1) ರಾಜ್ಯ ಸರ್ಕಾರವು, ಕಾಲಕಾಲಕ್ಕೆ ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂತೆ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪ್ರಾಧಿಕಾರಕ್ಕೆ ಧನ ಸಹಾಯಗಳನ್ನು ನೀಡಬಹುದು.

(2) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ, ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತೆ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಕಾಲಕಾಲಕ್ಕೆ ಪ್ರಾಧಿಕಾರಕ್ಕೆ ಸಾಲಗಳನ್ನು ನೀಡಬಹುದು.

**21. ಸಾಲ ಪಡೆಯಲು ಪ್ರಾಧಿಕಾರಕ್ಕೆ ಅಧಿಕಾರ.**- ಪ್ರಾಧಿಕಾರವು, ಕಾಲಕಾಲಕ್ಕೆ ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮತ್ತು ಈ ಸಂಬಂಧದಲ್ಲಿ ನಿಯಮಿಸಬಹುದಾದಂತೆ ಅಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಗತ್ಯವಾದ ಯಾವುದೇ ಮೊತ್ತದ ಸಾಲ ಪಡೆಯಬಹುದು.

**22. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ.-** (1) ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಅಗತ್ಯಪಡಿಸಲಾದಂತೆ ಸರಿಯಾದ ಲೆಕ್ಕ ಪುಸ್ತಕಗಳನ್ನು ಮತ್ತು ಇತರ ಪುಸ್ತಕಗಳನ್ನು ನಿರ್ವಹಿಸುವಂತೆ ಮಾಡತಕ್ಕದ್ದು ಮತ್ತು ಅಂಥ ನಿಯಮಗಳಿಗನುಸಾರವಾಗಿ ಲೆಕ್ಕಪತ್ರಗಳ ವಾರ್ಷಿಕ ವಿವರಣ ಪತ್ರವನ್ನು ಸಿದ್ಧಪಡಿಸತಕ್ಕದ್ದು.

(2) ಪ್ರಾಧಿಕಾರವು, ಅದರ ಲೆಕ್ಕ ಪತ್ರಗಳನ್ನು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತೆ ಅಂಥ ವ್ಯಕ್ತಿಗಳಿಂದ ಲೆಕ್ಕ ಪರಿಶೋಧನೆ ಮಾಡಿಸತಕ್ಕದ್ದು.

(3) ಪ್ರಾಧಿಕಾರವು, ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆ ಮಾಡಿಸಿದ ಕೂಡಲೇ ಅದರ ಒಂದು ಪ್ರತಿಯನ್ನು, ಅದರ ಮೇಲೆ ಲೆಕ್ಕಪರಿಶೋಧಕನ ವರದಿಯ ಒಂದು ಪ್ರತಿಯೊಡನೆ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ನಿಯಮಿಸಲಾದ ರೀತಿಯಲ್ಲಿ ಲೆಕ್ಕಪತ್ರಗಳನ್ನು ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ಸೂಕ್ತ ಬೆಲೆಯಲ್ಲಿ ಮಾರಾಟ ಮಾಡಲು ಅವುಗಳ ಪ್ರತಿಗಳನ್ನು ಇಡತಕ್ಕದ್ದು.

(4) ಪ್ರಾಧಿಕಾರವು, ರಾಜ್ಯ ಸರ್ಕಾರವು ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿದ ತರುವಾಯ ನೀಡಲು ಸೂಕ್ತವೆಂದು ಭಾವಿಸುವ ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

## ಅಧ್ಯಾಯ - V

### ಸಂಕೀರ್ಣ ವಿಷಯಗಳು

**23. ಪ್ರಾಧಿಕಾರದಿಂದ ನಿರ್ದೇಶನಗಳು.-** (1) ಪ್ರಾಧಿಕಾರವು, 11ನೇ ಪ್ರಕರಣದ ಅಥವಾ ಯಾವುದೇ ಪಟ್ಟಣ ಯೋಜನೆಯ ಅಡಿಯಲ್ಲಿ ರೂಪಿಸಿದ ಅಭಿವೃದ್ಧಿ ಯೋಜನೆಗಳು ಮತ್ತು ಸ್ಕೀಮುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ, ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮಕ್ಕೆ ಮತ್ತು ಪರಂಪರೆ ಪ್ರದೇಶದಲ್ಲಿಯ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಪಟ್ಟ ಅಂಥ ಇತರ ನಿಕಾಯಗಳಿಗೆ ನಿರ್ದೇಶನಗಳನ್ನು ನೀಡಬಹುದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಪ್ರತಿಯೊಂದು ನಿರ್ದೇಶನವನ್ನು, ಅದನ್ನು ಯಾವ ನಿಕಾಯಕ್ಕೆ ನೀಡಲಾಗಿದೆಯೋ ಆ ನಿಕಾಯವು ಪಾಲಿಸತಕ್ಕದ್ದು. ತಪ್ಪಿದರೆ, ಪ್ರಾಧಿಕಾರವು (1)ನೇ ಉಪಪ್ರಕರಣದ ಅಡಿಯಲ್ಲಿ ನೀಡಿದ ನಿರ್ದೇಶನಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯಕ ಕ್ರಮಕೈಗೊಳ್ಳಲು ಮತ್ತು ಅದಕ್ಕಾಗಿ ಯಾವುದೇ ವೆಚ್ಚವನ್ನು ವಹಿಸಿದ್ದರೆ ಅದನ್ನು ಸಂಬಂಧಪಟ್ಟ ನಿಕಾಯದಿಂದ ವಸೂಲ್ಮಾಡಲು ಸಕ್ಷಮವಾಗಿರತಕ್ಕದ್ದು.

**24. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡ.-** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಿದ ಅಥವಾ ಮಂಜೂರಾದ ಯಾವುದೇ ನಿಯಮ, ವಿನಿಯಮ ಅಥವಾ ಉಪವಿಧಿ ಅಥವಾ ಸ್ಕೀಮಿನ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಮತ್ತು ಉಲ್ಲಂಘನೆಯು ಮುಂದುವರಿಯುತ್ತಿರುವ ಸಂದರ್ಭದಲ್ಲಿ, ಒಂದು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಕಾರಾವಾಸದಿಂದ ಅಥವಾ ಮೊದಲ ಅಪರಾಧ ಉಲ್ಲಂಘನೆಯ ತರುವಾಯ ಅಪರಾಧ ಉಲ್ಲಂಘನೆಯು ಮುಂದುವರಿದ ಅವಧಿಯಲ್ಲಿ ಪ್ರತಿದಿನಕ್ಕೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದ ದಂಡಿತನಾಗತಕ್ಕದ್ದು.

**25. ಕಂಪೆನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪೆನಿಯಾಗಿದ್ದರೆ, ಅಪರಾಧ ಘಟಿಸುವ ಕಾಲದಲ್ಲಿ ಅದರ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕಂಪೆನಿಯ ಪ್ರಭಾರದಲ್ಲಿದ್ದ ಮತ್ತು ಕಂಪೆನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು

ಹಾಗೂ ಕಂಪೆನಿಯು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ಕಾನೂನು ವ್ಯವಹರಣೆಗೆ ಬದ್ಧನಾಗಿರತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿರುವುದು ಯಾವುದು, ಅಪರಾಧವು ತನ್ನ ತಿಳಿವಳಿಕೆಗೆ ಬರದೇ ಘಟಿಸಿತೆಂದು ಅಥವಾ ಅಂಥ ಅಪರಾಧ ಘಟಿಸುವುದನ್ನು ತಪ್ಪಿಸುವುದಕ್ಕಾಗಿ ಸೂಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಆತನು ರುಜುವಾತುಪಡಿಸಿದರೆ, ಅಂಥ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ಶಿಕ್ಷೆಗೆ ಬದ್ಧನಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧವನ್ನು ಕಂಪೆನಿಯು ಮಾಡಿದ್ದಲ್ಲಿ ಮತ್ತು ಅಪರಾಧವು ಕಂಪೆನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಘಟಿಸಿತೆಂದು ರುಜುವಾತಾದರೆ, ಕಂಪೆನಿಯ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಬದ್ಧರಾಗಿರತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ:**- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪೆನಿ" ಎಂದರೆ, ಒಂದು ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮ್ ಅಥವಾ ವ್ಯಕ್ತಿಗಳ ಇತರ ಅಸೋಸಿಯೇಷನ್ನನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**26. ಅಭಿಯೋಜನೆಗಾಗಿ ಅನುಮತಿ.**- ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ, ಪ್ರಾಧಿಕಾರದ ಅಥವಾ ಈ ಸಂಬಂಧದಲ್ಲಿ ಪ್ರಾಧಿಕಾರದಿಂದ ಪ್ರಾಧಿಕೃತನಾದ ಯಾವೊಬ್ಬ ಅಧಿಕಾರಿಯ ಪೂರ್ವಾನುಮೋದನೆ ಇಲ್ಲದೆ ಯಾವುದೇ ಅಭಿಯೋಜನೆಯನ್ನು ಹೂಡತಕ್ಕದ್ದಲ್ಲ.

**27. ಪ್ರಾಧಿಕಾರವು ತನ್ನ ಅಥವಾ ಅದರ ವಿರುದ್ಧದ ಕ್ಲೇಮುಗಳನ್ನು ಸಂಧಾನ ಮಾಡಿಕೊಳ್ಳುವುದು.**- ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ಅದು ಮಾಡಿಕೊಂಡ ಯಾವುದೇ ಕರಾರಿನಿಂದ ಅಥವಾ ಅದು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಯಾವುದೇ ಕ್ರಮ ಅಥವಾ ದಾವೆಯಿಂದ ಉದ್ಭವಿಸಿದ ಕ್ಲೇಮು ಅಥವಾ ತಗಾದೆಯ ಬಗ್ಗೆ ತಾನು ಸಾಕಷ್ಟೆಂದು ಭಾವಿಸಬಹುದಾದಂತೆ ಅಂಥ ಮೊತ್ತ ಅಥವಾ ಇತರ ಪರಿಹಾರಕ್ಕಾಗಿ ರಾಜಿ ಅಥವಾ ಸಂಧಾನ ಮಾಡಿಕೊಳ್ಳಬಹುದು:

ಪರಂತು, ಐವತ್ತು ಸಾವಿರ ರೂಪಾಯಿಗಳನ್ನು ಮೀರುವ ಅಂಥ ಯಾವುದೇ ಕ್ಲೇಮು ಅಥವಾ ತಗಾದೆಯ ಬಗ್ಗೆ ರಾಜ್ಯ ಸರ್ಕಾರದ ಪೂರ್ವಾನುಮೋದನೆಯ ಹೊರತಾಗಿ ರಾಜಿ ಮಾಡಿಕೊಳ್ಳತಕ್ಕದ್ದಲ್ಲ ಅಥವಾ ಸಂಧಾನ ಮಾಡಿಕೊಳ್ಳತಕ್ಕದ್ದಲ್ಲ.

**28. ವಸೂಲ್ಮಾಡಲಾದ ಜುಲ್ಮಾನೆಗಳನ್ನು ನಿಧಿಗೆ ಜಮೆ ಮಾಡುವುದು.**- ಈ ಅಧಿನಿಯಮದ ಅಡಿಯಲ್ಲಿ ಅಭಿಯೋಜನೆಗಳ ಸಂಬಂಧದಲ್ಲಿ ಸಂಗ್ರಹಿಸಲಾದ ಎಲ್ಲಾ ಜುಲ್ಮಾನೆಗಳನ್ನು ಪ್ರಾಧಿಕಾರ ನಿಧಿಗೆ ಜಮೆ ಮಾಡತಕ್ಕದ್ದು.

**29. ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರುವುದು.**- ಪ್ರಾಧಿಕಾರದ ಪ್ರತಿಯೊಬ್ಬ ಸದಸ್ಯ, ಪ್ರತಿಯೊಬ್ಬ ಅಧಿಕಾರಿ ಮತ್ತು ಇತರ ನೌಕರರು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರರಾಗಿರತಕ್ಕದ್ದು.

**30. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.**- ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ ಅಥವಾ ವಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ

ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

**31. ರಾಜ್ಯ ಸರ್ಕಾರದಿಂದ ನಿಯಂತ್ರಣ, ಇತ್ಯಾದಿ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವೆಂದು ತಾನು ಅಭಿಪ್ರಾಯಪಡುವಂತೆ ಅಂಥ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ನೀಡಬಹುದು. ಪ್ರಾಧಿಕಾರವು ಈ ಅಧಿನಿಯಮದ ಸಮರ್ಥ ಪ್ರಶಾಸನಕ್ಕಾಗಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನೀಡಬಹುದಾದಂತೆ ಅಂಥ ನಿರ್ದೇಶನಗಳನ್ನು ನೆರವೇರಿಸತಕ್ಕದ್ದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

(2) ಪ್ರಾಧಿಕಾರವು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂತೆ ಅಂಥ ವರದಿಗಳು ಮತ್ತು ಇತರ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರವು ತನ್ನ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಥವಾ ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಅಥವಾ ಆ ಸಂಬಂಧದಲ್ಲಿ, ಪ್ರಾಧಿಕಾರ ಮತ್ತು ಒಂದು ಸ್ಥಳೀಯ ಪ್ರಾಧಿಕಾರದ ನಡುವೆ ಯಾವುದೇ ವಿವಾದ ಉದ್ಭವಿಸಿದರೆ, ಅಂಥ ವಿವಾದದ ಮೇಲೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**32. ಅಧಿನಿಯಮವು ಇತರ ಕಾನೂನುಗಳ ಮೇಲೆ ಹೆಚ್ಚಿನ ಪ್ರಭಾವ ಹೊಂದಿರುವುದು.-** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅದಕ್ಕೆ ಅಸಂಗತವಾದುದು ಏನೇ ಒಳಗೊಂಡಿದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**33. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನವು ಅಥವಾ ಅದರ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಉಭಯ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಡಾದ ರೂಪದಲ್ಲಿ ಪರಿಣಾಮಕಾರಿ ಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದಾಗ್ಯೂ ಅಂಥ ಮಾರ್ಪಾಡು ಅಥವಾ ರದ್ದಿಯಾತಿಯು, ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಮಾನ್ಯತೆಗೆ ಪ್ರತಿಕೂಲ ಉಂಟು ಮಾಡತಕ್ಕದ್ದಲ್ಲ.

**34. ವಿನಿಯಮಗಳು.-** ಪ್ರಾಧಿಕಾರವು ಅಧಿನಿಯಮದ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಸಾಧ್ಯವಾಗುವಂತೆ ಅಧಿಸೂಚನೆ ಮೂಲಕ ಮತ್ತು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಡನೆ, ಈ ಅಧಿನಿಯಮಕ್ಕೆ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಅಸಂಗತವಾಗದಂತೆ ವಿನಿಯಮಗಳನ್ನು ರಚಿಸಬಹುದು. ವಿನಿಯಮಗಳ ಮೂಲಕ ಉಪಬಂಧಿಸಲು ಅಗತ್ಯವಾಗಿರುವ ಅಥವಾ ಉಪಬಂಧಿಸಬಹುದೆಂದು ಪ್ರಾಧಿಕಾರವು ಅಭಿಪ್ರಾಯಪಡುವ ಯಾವುದೇ ವಿಷಯದ ಸಂಬಂಧದಲ್ಲಿ ವಿನಿಯಮಗಳನ್ನು ರಚಿಸಬಹುದು.

**35. ತೊಂದರೆಗಳ ನಿವಾರಣೆ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ತೊಂದರೆಯನ್ನು ನಿವಾರಿಸಲು ಸಂದರ್ಭವು ಅಗತ್ಯಪಡಿಸಬಹುದಾದಂತೆ ತನಗೆ ಅವಶ್ಯಕವೆಂದು ಕಂಡುಬರುವ ಯಾವುದೇ ಕಾರ್ಯವನ್ನು ಮಾಡಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಪ್ರಕಟಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು ಮತ್ತು ರಾಜ್ಯ ವಿಧಾನ ಮಂಡಲವು ಮಾಡಬಹುದಾದ ಯಾವುದೇ ಮಾರ್ಪಾಡಿಗೊಳಪಟ್ಟು, ಈ ಅಧಿನಿಯಮದಲ್ಲಿ ಅಧಿನಿಯಮಿಸಲಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

**36. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1961ರ ತಿದ್ದುಪಡಿ.–** ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1961 (1963ರ ಕರ್ನಾಟಕ ಅಧಿನಿಯಮ 11) ರಲ್ಲಿ,–

(1) 2ನೇ ಪ್ರಕರಣದಲ್ಲಿ (7)ನೇ ಖಂಡದಲ್ಲಿ, (ಎ) ಉಪಖಂಡದ (iಎ) ಬಾಬಿನ ತರುವಾಯ ಈ ಮುಂದಿನ ಬಾಬನ್ನು ಸೇರಿಸತಕ್ಕದ್ದು, ಎಂದರೆ:–

"(iಬಿ) ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ 2002 ರಲ್ಲಿ ಪರಿಭಾಷಿಸಲಾದಂತೆ ಪರಂಪರೆ ಪ್ರದೇಶ (ಇದರಲ್ಲಿ ಇನ್ನು ಮುಂದೆ ಪರಂಪರೆ ಪ್ರದೇಶ ಎಂದು ಉಲ್ಲೇಖಿಸಲಾಗಿದೆ), ಆ ಅಧಿನಿಯಮದ ಅಡಿಯಲ್ಲಿ ರಚಿತವಾದ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ."

(2) 4ಎ ಪ್ರಕರಣದಲ್ಲಿ, (1)ನೇ ಉಪ ಪ್ರಕರಣದಲ್ಲಿ, ಪರಂತುಕದ ತರುವಾಯ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಪರಂಪರೆ ಪ್ರದೇಶದ ಸಂಬಂಧದಲ್ಲಿ, ಈ ಉಪಪ್ರಕರಣದ ಅಡಿಯಲ್ಲಿ ಘೋಷಿಸಲಾದ ಸ್ಥಳೀಯ ಯೋಜನಾ ಪ್ರದೇಶವು, ಪರಂಪರೆ ಪ್ರದೇಶಕ್ಕೆ ಸಮವ್ಯಾಪಕವಾಗಿ ಇರತಕ್ಕದ್ದು"

(3) 12ನೇ ಪ್ರಕರಣದಲ್ಲಿ, (1)ನೇ ಉಪ ಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಪರಂಪರೆ ಪ್ರದೇಶವನ್ನು ಒಳಗೊಂಡ ಸ್ಥಳೀಯ ಯೋಜನಾ ಪ್ರದೇಶದ ಸಂಬಂಧದಲ್ಲಿ, ಸ್ಥೂಲ ಅಭಿವೃದ್ಧಿ ಯೋಜನೆಯು, 21ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಯಿಂದ (ಜಿ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಸಹ ಒಳಗೊಂಡಿರತಕ್ಕದ್ದು ಮತ್ತು ಹಾಗೆ ಸಿದ್ಧಪಡಿಸಲಾದ ಯೋಜನೆಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಪರಂಪರೆ ಪ್ರದೇಶದ ಸಂಬಂಧದಲ್ಲಿ ಸಮಗ್ರ ಅಭಿವೃದ್ಧಿ ಯೋಜನೆ ಎಂದು ಭಾವಿಸತಕ್ಕದ್ದು ಮತ್ತು 19 ರಿಂದ 23ರ ವರೆಗಿನ ಪ್ರಕರಣಗಳು ಅಂಥ ಭಾವಿತ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದಕ್ಕೆ ಅನ್ವಯವಾಗಿರತಕ್ಕದ್ದಲ್ಲ".

(4) 81ಡಿ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"81ಇ. ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ರಚನೆಯ ಪರಿಣಾಮಗಳು.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ, 2002ರ ಅಡಿಯಲ್ಲಿ ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರವು ರಚಿತವಾದ ದಿನಾಂಕದಿಂದ ಜಾರಿಗೆ ಬರುವಂತೆ, ಅಂಥ ಪ್ರಾಧಿಕಾರವು, ಪರಂಪರೆ ಪ್ರದೇಶವನ್ನು ಒಳಗೊಂಡ ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಸ್ಥಳೀಯ ಯೋಜನಾ ಪ್ರಾಧಿಕಾರವಾಗಿರತಕ್ಕದ್ದು ಮತ್ತು ಅದು ಪರಂಪರೆ ಪ್ರದೇಶಕ್ಕಾಗಿ ರಚಿತವಾದ ಸ್ಥಳೀಯ ಯೋಜನಾ ಪ್ರಾಧಿಕಾರವಾಗಿದ್ದರೆ ಹೇಗೋ ಹಾಗೆ, ಈ ಅಧಿನಿಯಮದ

ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು."

**37. 1974ರ ಕರ್ನಾಟಕ ಅಧಿನಿಯಮ 32ನ್ನು ಪ್ರಾಧಿಕಾರದ ಆವರಣಕ್ಕೆ ಅನ್ವಯಿಸುವುದು.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ದಿನಾಂಕದಿಂದ, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ನ್ನು ಪ್ರಾಧಿಕಾರಕ್ಕೆ ಸೇರಿದ, ಅದರಲ್ಲಿ ನಿಹಿತವಾದ ಅಥವಾ ಗುತ್ತಿಗೆಗೆ ಕೊಟ್ಟ ಆವರಣಕ್ಕೆ, ಆದರೆ (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅನ್ವಯಿಸತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಮೇಲ್ಕಂಡ ಅಧಿನಿಯಮವು ಮತ್ತು ಅದರಡಿ ರಚಿಸಿದ ನಿಯಮಗಳು ಈ ಮುಂದಿನ ಮಾರ್ಪಾಡುಗಳೊಡನೆ ಪ್ರಾಧಿಕಾರಕ್ಕೆ ಸೇರಿದ ಆವರಣಗಳಿಗೆ ಅನ್ವಯವಾಗತಕ್ಕದ್ದು, ಎಂದರೆ,-

(ಎ) ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂತೆ ರಾಜ್ಯ ಸರ್ಕಾರದ ಅಥವಾ ಪ್ರಾಧಿಕಾರದ ಒಬ್ಬ ಅಧಿಕಾರಿಯನ್ನು ಮೇಲ್ಕಂಡ ಅಧಿನಿಯಮದ ಉದ್ದೇಶಗಳಿಗಾಗಿ ಸಕ್ಷಮ ಪ್ರಾಧಿಕಾರಿ ಎಂದು ನೇಮಿಸಬಹುದು;

(ಬಿ) ಆ ಅಧಿನಿಯಮದಲ್ಲಿ ಮತ್ತು ಆ ನಿಯಮಗಳಲ್ಲಿ "ಸಾರ್ವಜನಿಕ ಆವರಣ" ಕ್ಕೆ ಮಾಡಿದ ಉಲ್ಲೇಖಗಳು ಪ್ರಾಧಿಕಾರದ ಆವರಣಕ್ಕೆ ಮಾಡಿದ ಉಲ್ಲೇಖಗಳೆಂದು ಭಾವಿಸತಕ್ಕದ್ದು ಮತ್ತು ಆ ಅಧಿನಿಯಮದ 6, 7, 8, 14, 15, 16 ಮತ್ತು 17ನೇ ಪ್ರಕರಣಗಳಲ್ಲಿ "ರಾಜ್ಯ ಸರ್ಕಾರ" ಕ್ಕೆ ಮಾಡಿದ ಉಲ್ಲೇಖಗಳನ್ನು, ಪ್ರಾಧಿಕಾರಕ್ಕೆ ಮಾಡಿದ ಉಲ್ಲೇಖಗಳೆಂದು ಭಾವಿಸತಕ್ಕದ್ದು.

**ಅನುಸೂಚಿ**

(2(ಕ್ಯೂ) ಪ್ರಕರಣವನ್ನು ನೋಡಿ)

ಭಾಗ-ಎ

ಕೋರ್ ಪ್ರದೇಶ ವಲಯ

ಅಧಿಸೂಚನೆ ಸಂಖ್ಯೆ: ಐಟಿವೈ 137 ಕೆಎಂವಿ 84 ದಿನಾಂಕ 22-10-1988 ರ ಅಡಿಯಲ್ಲಿ ರಕ್ಷಿತ ಪ್ರದೇಶವೆಂಬುದಾಗಿ ರಾಜ್ಯ ಸರ್ಕಾರವು ಅಧಿಸೂಚಿಸಿದ 41.80 ಚ.ಕಿ.ಮೀ. ಪ್ರದೇಶ:-

**ಭಾಗ - ಬಿ**

**ರಕ್ಷಾ ವಲಯ**

ಕೋರ್ ಪ್ರದೇಶ ವಲಯದ ಪರಿಮಿತಿಗಳಿಂದಾಚೆಗೆ ಎಲ್ಲಾ ಪಕ್ಕಗಳಲ್ಲೂ 1 ಕಿ.ಮೀ ವರೆಗೆ ವಿಸ್ತರಿಸಿದ 53.0 ಚ.ಕಿ.ಮೀ ಪ್ರದೇಶ.

**ಭಾಗ - ಸಿ**

**ಹೊರ ಪ್ರದೇಶ ವಲಯ**

ರಕ್ಷಾ ವಲಯದ ಪರಿಮಿತಿಗಳಿಂದಾಚೆಗೆ ಎಲ್ಲಾ ಕಡೆಗಳಲ್ಲೂ 1 ಕಿ.ಮೀ. ವರೆಗೆ ವಿಸ್ತರಿಸಿದ 31.0 ಚ.ಕಿ.ಮೀ. ಪ್ರದೇಶ.